ತಾನು ಹೀಗೆ ಸಣ್ಣದೊಂದು ಗಾಳಿಯ ಸ್ಪರ್ಶವನ್ನೂ ಸವಿಯದೇ... ಕಾಲೇಜಿನ ದಿನಗಳಲ್ಲಿ ಇದೇ ಈ ಬೆತ್ತಲೆಯ ಬಗ್ಗೆ ಕುತೂಹಲವಿತ್ತು. ಗೊತ್ತೇ ಇರದವನ ಎದುರು ತೆರೆದುಕೊಳ್ಳುವ ಭಯವಿತ್ತು, ಕಾತರವಿತ್ತು, ನಿರೀಕ್ಷೆಯೂ ಇತ್ತು ಮದುವೆ ಎಂದಾದಕ್ಷಣಕ್ಕೆ ಅವೆಲ್ಲ ಎದುರು ಬಂದು ನಿಂತು ತನ್ನನ್ನು ಲಜ್ಜೆಯ ಹೊಳೆಯಲ್ಲಿ ಮೀಯಿಸಬಹುದೆಂದು ಕನಸಿತ್ತು. ಆದರೆ ಈಗ ಬೆತ್ತಲೆ ಎನ್ನುವುದು ನಿರ್ವಿಕಾರ ಎನ್ನುವಷ್ಟರ ಮಟ್ಟಿಗೆ ಮನಸ್ಸು ಮರಗಟ್ಟಿ ಹೋಗಿದೆ. ಬಹುಶಃ ಹಾಗಾಗಿದ್ದೇ ಒಳ್ಳೆಯದಾಯಿತು. ಅದಿಲ್ಲದಿದ್ದರೆ? ತಾನು ಈಗ ಹೀಗೆ... ಅರುಂಧತಿ ಮತ್ತೇನನ್ನೋ ಯೋಚಿಸುವ ಹೊತ್ತಿಗೆ...

ಹೊರಗಿನಿಂದ ರೂಮನ್ನು ಪ್ರವೇಶಿಸಿದ ವೈದ್ಯೆ, "ಸಾರಿ ಮಿಸ್ಸೆಸ್ ಗೌತಮ್" ಎನ್ನುತ್ತ ಒಳ ಬಂದರು. ಅವರು ತನ್ನ ಹೆಸರು ಕರೆಯದೆ ಗೌತಮನ ಹೆಸರು ಹೇಳಿದ್ದರಿಂದ ಅರುಂಧತಿಯ ಮೈ ನರಗಳೆಲ್ಲ ಬಿಗಿದುಕೊಂಡವು. 'ತಾನು ಹೀಗೆಲ್ಲ ಅಪರಿಚಿತರ ಮುಂದೆ ಬಯಲಾಗಲಿಕ್ಕೆ ಮೂಲ ಕಾರಣ ಅವನೇ' ಎಂದು ಅನ್ನಿಸಿ ಕೈ ಬೆರಳುಗಳು ಕೋಪದಿಂದ ಸೆಟೆದುಕೊಂಡವು. ಆದರೂ ಪಾಪ ಅವನೇನು ಮಾಡಿಯಾನು – 'ತನ್ನ ಮೇಲೆ ಮೋಹ ಉಕ್ಕದಿರುವುದು ಅವನ ತಪ್ಪಲ್ಲ' ಎಂದು ತನ್ನೊಳಗೇ ಸಮರ್ಥಿಸಿಕೊಂಡಳು. ವೈದ್ಯೆಗೆ ಇವಳ ಸೆಟೆದುಕೊಂಡ ಮೈ ಹುರಿಗಳಾಗಲಿ, ಬೆರಳುಗಳಾಗಲಿ ಗಮನಕ್ಕೆ ಬರಲಿಲ್ಲ. ಬದಲಾಗಿ ಆಕೆ, "ಎರಡು ಸಿಸೇರಿಯನ್ ಇತ್ತು. ಈಗಿನ ಹುಡುಗಿಯರಂತೂ ನಾರ್ಮಲ್ ಒಪ್ಪದೇ ಇಲ್ಲ ನೋಡಿ, ನೋವು ತಡೆದುಕೊಳ್ಳಕ್ಕಾಗಲ್ಲ ಅನ್ನೋದು ಅವರು ಕೊಡೋ ಕಾರಣ ಆದ್ರೂ, ನಿಜದ ಕಾರಣ ನಾರ್ಮಲ್ ಆದ್ರೆ ಸೆಕ್ಸ್ ಸಾಟಿಸ್‌ಫ್ಯಾಕ್ಷನ್ ಸಿಗದೆ ಗಂಡ ಬೇರೆ ಕಡೆಗೆ ಹೋದಾನು ಎನ್ನುವ ಇನ್ಫಿರಿಯಾರಿಟಿ ಕಾಂಪ್ಲೆಕ್ಸ್. ನೀವೇನನ್ನುತ್ತೀರಿ" ಎಂದು ಇವಳನ್ನೇ ಪ್ರಶ್ನಿಸಿದಳು.

ಮದುವೆಯಾಗಿ ನಾಲ್ಕು ವರ್ಷವಾದರೂ ಹೊರಳಾಟ ಅನ್ನುವುದು ಹೇಗಿರುತ್ತದೆ ಅನ್ನುವುದೇ ಗೊತ್ತಿಲ್ಲದೆ ಮಗುವನ್ನು ಹಡೆಯಬೇಕು ಎನ್ನುವ ಒಂದೇ ಹಟಕ್ಕೆ ಬಿದ್ದು ಹೀಗೆ ಆಸ್ಪತ್ರೆಗೆ ಸೇರಿ, "ಯಾಕೋ ಏನೋ ಇನ್ನೂ ನೀರು ನಿಂತಿಲ್ಲ" ಎನ್ನುತ್ತ ತನ್ನ ಗಂಡನ ತಪ್ಪು ಏನೂ ಇಲ್ಲ ಎಂದವಳಿಗೆ ಈ ಪ್ರಶ್ನೆ ಮತ್ತು ಉತ್ತರ ಎರಡೂ ವಿಚಿತ್ರ ಅನ್ನಿಸಿ ಏನೂ ಮಾತನಾಡದೆ ಸುಮ್ಮನಾದಳು. ಲೈಂಗಿಕತೆ ಅನ್ನೋದು ಅಷ್ಟೊಂದು ಅನಿವಾರ್ಯವಾ ಅನ್ನಿಸಿತು. ಆದರೆ ಅಂತಹ ಅನಿವಾರ್ಯತೆ ಗೌತಮನನ್ನು ಏಕೆ ಕಾಡಲಿಲ್ಲ ಎನ್ನುವ ಪ್ರಶ್ನೆಯೂ ನುಗ್ಗಿ ಬಂದಿತು. ಏನು ಕಡಿಮೆ ಇತ್ತು ತನ್ನಲ್ಲಿ – ಒಂದು ದಿನಕ್ಕೂ ತನ್ನನ್ನು ಬಯಸದೇ ಹೋಗುವಷ್ಟು. ಅಂದರೆ ಇದು ದೇಹಕ್ಕೆ ಸಂಬಂಧಿಸದೆ ಮನಸ್ಸಿಗೆ ಸಂಬಂಧಿಸಿದ್ದಾ? ದೇಹಕ್ಕೆ ಸಂಬಂಧಿಸಿದ್ದರೆ ಆತ ಎಂದೋ ತನ್ನ ಬಳಿ ಬಂದು ಬಿಡುತ್ತಿದ್ದ, ಆದರೆ ಹಾಗಾಗಲಿಲ್ಲ. "ನೀನು ನನ್ನಿಂದ ಏನನ್ನೂ ನಿರೀಕ್ಷಿಸಬೇಡ" ಎಷ್ಟು ನಿರಾಳವಾಗಿ, ನಿರುದ್ವಿಗ್ನವಾಗಿ ಹೇಳಿ ಅಂತೆಯೇ ಉಳಿದು ಹೋದ. ಅವನ ಮೌನದ ಕುದಿಯ ತಾಳಲಾರದೆ ತಾನು ಸಿಡಿದಿದ್ದೆ; "ಏನು ತಪ್ಪಿದೆ ನನ್ನದು" ಎಂದು ಜೀವವಿಲ್ಲದ ಗೋಡೆಗಳ ನಡುವೆ ನಿಂತು ಗೋಗರಿದಿದ್ದೆ. ಎಲ್ಲವೂ ಶೂನ್ಯವೇ ಆಗಿತ್ತಲ್ಲದೆ ಬೇರೇನೂ ಅಲ್ಲ. "ಅಮ್ಮನ ಸಲುವಾಗಿ ಮದುವೆಯಾದೆ ಕ್ಷಮಿಸಿ ಬಿಡು" ಎಂದು ಎದ್ದು ಹೋಗಿದ್ದ.

ಆ ಕ್ಷಣ ಕುಸಿದು ಹೋಗಿದ್ದೆ. ಕೀಳರಿಮೆಯ ಶೂಲಕ್ಕೆ ಸಿಕ್ಕ ಮನಸ್ಸು ರೆಕ್ಕೆ ಹರಿದ ಹತಾಶ ಹಕ್ಕಿಯಂತೆ ಒದ್ದಾಡಿ ಹೋಗಿತ್ತು. ಪದೇ ಪದೇ ಅವನೆದುರು ಸಿಡಿದು ಹೊತ್ತಿ ಉರಿಯಬೇಕು ಅನ್ನಿಸುತ್ತಿತ್ತು. ಹಾಗೆ ಮಾಡಿದರೆ ಪ್ರಯೋಜನವಾದರೂ ಏನಿತ್ತು? ಯಾವ ಹೆಂಗಸನ್ನು ಕಂಡರೂ ಉಕ್ಕಲಾರದ ಉಲ್ಕೆಯ ಮುಂದೆ ಉರಿಯುವ ಅಗತ್ಯವಾದರೂ ಎಲ್ಲಿತ್ತು. ಅಲ್ಲದೆ